ಕರ್ನಾಟಕದ ಸುವರ್ಣ ಜಯಂತಿಯ ಅಂಗವಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ರಂಗ ಮಂದಿರವನ್ನು ಕಟ್ಟಿಸಬೇಕೆಂದು ಆಗಿದೆ. ಇದು ಪ್ರತಿಯೊಂದು ಜಿಲ್ಲೆಯಲ್ಲಿ ಮುಗಿಯುತ್ತಾ ಬರುತ್ತಿದೆ. ಇಲ್ಲೂ ಸಹ ನಾವು ಕೊಡುತ್ತಿದ್ದೇವೆ. ಇಲ್ಲಿ ವಿಶೇಷವಾಗಿ ಪಾಟೀಲ್‌ಪುಟ್ಟಪ್ಪನವರ ಹೆಸರಿನಲ್ಲಿರುವ ಕಲಾ ಮಂದಿರಕ್ಕೆ ಬೇರೆ ಕಡೆ ಕೂಡ ಹೆಚ್ಚಿನ ಹಣವನ್ನು ಕೊಟ್ಟು ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಏನು ಪ್ರಶ್ನೆ ಕೇಳಿದ್ದಾರೆಂದರೆ, ಧಾರವಾಡ ಜಿಲ್ಲೆ ಸಾಂಸ್ಕೃತಿಕವಾಗಿ ಗ್ರಾಮೀಣ ಭಾಗದಲ್ಲಿ ಬೆಳೆದಿರುವಂಥ ಜಿಲ್ಲೆ. ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿರುವ ಮಂದಿರಗಳ ಬಗ್ಗೆ ಮಾಹಿತಿ ಕೊಟ್ಟಿದ್ದೀರಿ, ಅದು ನಿಜ. ಗ್ರಾಮೀಣ ಪ್ರದೇಶಕ್ಕೆ ಮತ್ತು ತಾಲ್ಲೂಕು ಕೇಂದ್ರಗಳಿಗೆ ಅಂಥ ಕಡೆ ಏನಾದರೂ ಈ ರೀತಿ ಕಲಾ ಮಂದಿರಗಳನ್ನು ಮಾಡಿ ಅಲ್ಲಿನ ಕಲೆಯನ್ನು ಉಳಿಸಲು ಆಗುತ್ತದೆಯೇ ಎಂದು ಅವರು ಕೇಳಿದ್ದಾರೆ, ಅದಕ್ಕೆ ಸ್ಪಷ್ಟವಾದ ಉತ್ತರವನ್ನು ತಾವು ಕೊಡಬೇಕು.

ಶ್ರೀ ಧರ್ಮಸಿಂಗ್ : ಧಾರವಾಡ ಜಿಲ್ಲೆಯಲ್ಲಿರುವ ಬಗ್ಗೆ ಹೇಳಿದ್ದೇನೆ. ಹುಬ್ಬಳ್ಳಿ ಮತ್ತು ಬೇರೆ ಬೇರೆ ಕಡೆಗೆ ಎಷ್ಟು ಹಣವನ್ನು ಕೊಟ್ಟಿದ್ದೇವೆ ಎಂಬ ಬಗ್ಗೆ ಹೇಳಿದ್ದೇನೆ. ಅದರಲ್ಲಿ ಮನ್ಸೂರ್, ಅಮೀಮ್‌ಬಾವಿ, ರೆಟ್ಟಿವಾಡದಲ್ಲಿದೆ ಕಲಘಟಗಿಯಲ್ಲಿದೆ, ರಾಯನಾಡ್‌ದಲ್ಲಿದೆ, ದರ್ಶಾಪುರ್‌ನಲ್ಲಿದೆ, ಇವೆಲ್ಲಾ ರಂಗ ಮಂದಿರಕ್ಕೆ ನಾಲ್ಕು ಲಕ್ಷ ರೂಪಾಯಿ ಧನ ಸಹಾಯ ಕೊಟ್ಟಿದ್ದೇವೆ.

ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ : ಧಾರವಾಡ ಜಿಲ್ಲೆಯ ಬಗ್ಗೆ ಹೇಳಿದ್ದಾರೆ. ನಾಲ್ಕೈದು ಲಕ್ಷ ರೂಪಾಯಿಗಳು ಎಲ್ಲಾದಕ್ಕೂ ಸಾಕಾಗುವುದಿಲ್ಲ. ಎಲ್ಲಾ ಗ್ರಾಮಗಳಿಗೂ ಮಾಡಲು ಕನಿಷ್ಟ ಒಂದು ಕೋಟಿ ರೂಪಾಯಿಯಾದರೂ ಬಿಡುಗಡೆ ಮಾಡಬೇಕು.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ.....

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಡೆಹಿಡಿಯಲಾದ ಪ್ರಶ್ನೆಗಳಲ್ಲಿ ನನ್ನ ಪ್ರಶ್ನೆಯನ್ನು ಕೇಳುತ್ತೇನೆ, ಗ್ರಾಮೀಣ ಕೃಪ ಬಹಳ ಮಹತ್ವದ್ದು ಒಂದು ಐದು ನಿಮಿಷಗಳಲ್ಲಿ ಕೇಳಿಬಿಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ಆರಂಭವಾಗಿ ಈಗಾಗಲೇ ಎರಡು ಗಂಟೆಗಳಾಗಿವೆ. ಇನ್ನೂ ಮೂರು ಆ ರೀತಿ ಪ್ರಶ್ನೆಗಳು ಇದ್ದಾವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವಕಾಶ ಕೊಟ್ಟುಬಿಡಿ. ನೇರವಾಗಿ ಪ್ರಶ್ನೆ ಕೇಳಲು ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು : ಇದೇ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ಇವತ್ತೇನೋ ನಿಜ ಮೂರು ಪ್ರಶ್ನೆಗಳು ಇದ್ದಾವೆ, ಅವಕಾಶ ಕೊಟ್ಟುಬಿಡುತ್ತೇನೆ, ಆದರೆ ಇದೇ ರೀತಿ ಪ್ರತಿ ದಿನ ಆದರೆ ಕಷ್ಟವಾಗುತ್ತದೆ.

ವಿಧಾನಸೌಧ ಬಡಾವಣೆಯಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳ ಬಸ್‌ಗಳನ್ನು ವೇಳಾಪಟ್ಟಿಯಂತೆ ಓಡಿಸುವ ಬಗ್ಗೆ

(889) ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ದಾಸರಹಳ್ಳಿ ನಗರ ಸಭೆ ವ್ಯಾಪ್ತಿಯಲ್ಲಿ ಬರುವ ವಿಧಾನಸೌಧ ಬಡಾವಣೆಯಿಂದ ಕೃಷ್ಣ ರಾಜೇಂದ್ರ ಮಾರುಕಟ್ಟೆ ಬೆಂಗಳೂರು ಬಸ್ ನಿಲ್ದಾಣಕ್ಕೆ ಓಡಾಡುತ್ತಿರುವ

ಬಿ.ಎಂ.ಟಿ.ಸಿ. ಬಸ್ಸುಗಳು ವೇಳಾಪಟ್ಟಿಯಂತೆ ಓಡಿಸದೇ ಇರುವುದರಿಂದ ಸದರಿ ಬಡಾವಣೆಯ ಹಾಗೂ ಸುತ್ತ ಮುತ್ತಲಿನ ಬಡಾವಣೆಯ ನಿವಾಸಿಗಳಿಗೆ ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ತೊಂದರೆಯಾಗುತ್ತಿರುವುದನ್ನು ಸರಿಪಡಿಸುವಂತೆ ನಿವಾಸಿಗಳು ಹಾಗೂ ಸಾರ್ವಜನಿಕರು ಬಿ.ಎಂ.ಟಿ.ಸಿ. ಪ್ರಧಾನ ಸಂಚಾರಿ ನಿಯಂತ್ರಕರಿಗೆ ಹಾಗೂ ನಿರ್ದೇಶಕರುಗಳಿಗೆ ಸಾಕಷ್ಟು ಬಾರಿ ದೂರುಗಳನ್ನು ನೀಡಿದ್ದರೂ ಸಹ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು;

ಇ) ಬಸ್‌ಗಳ ಚಾಲಕರು ಹಾಗೂ ನಿರ್ವಾಹಕರು ವೇಳಾಪಟ್ಟಿಯಂತೆ ಬಸ್‌ಗಳನ್ನು ಓಡಿಸಲು ಪ್ರಯಾಣಿಕರು ಕೇಳಿಕೊಂಡಾಗ ಪ್ರಯಾಣಿಕರೊಂದಿಗೆ ದುರ್ವರ್ತನೆಯಿಂದ ವರ್ತಿಸುತ್ತಿರುವ ಬಗ್ಗೆ ದೂರುಗಳನ್ನು ಸಲ್ಲಿಸಿದ್ದಾಗ್ಯೂ ಸಹ ಅಂತಹವರ ಮೇಲೆ ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ಇರಲು ಕಾರಣವೇನು;

ಈ) ಪ್ರಯಾಣಿಕರಿಗೆ ಏನಾದರೂ ತೊಂದರೆಯಾದಲ್ಲಿ ದೂರವಾಣಿಯ ಮೂಲಕ ನೇರವಾಗಿ ದೂರು ಸಲ್ಲಿಸಿದಲ್ಲಿ ತತ್‌ಕ್ಷಣ ಕ್ರಮ ಕೈಗೊಳ್ಳಲಾಗುವುದೆಂದು ದಿನಪತ್ರಿಕೆಗಳಲ್ಲಿ ಪ್ರಕಟಿಸುತ್ತಿರುವುದು ನಿಜವಲ್ಲವೇ ಹಾಗಿದ್ದಲ್ಲಿ, ಇದುವರೆವಿಗೂ ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ಇರಲು ಕಾರಣವೇನು;

ಉ) ಹಾಗಿದ್ದಲ್ಲಿ, ಈಗಲಾದರೂ ಸರ್ಕಾರದವರು ಇಂತಹ ಅಧಿಕಾರಿಗಳು ಹಾಗೂ ಬಸ್‌ಗಳ ಚಾಲಕ/ನಿರ್ವಾಹಕರ ಮೇಲೆ ಶಿಸ್ತಿನ ಕ್ರಮ ಕೈಗೊಂಡು ವೇಳಾಪಟ್ಟಿಯಂತೆ ಬಸ್‌ಗಳನ್ನು ಓಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ವಿಧಾನಸೌಧ ಲೇಔಟ್‌ನ ಪ್ರಯಾಣಿಕರಿಂದ ಒಂದು ದೂರನ್ನು ಸ್ವೀಕರಿಸಲಾಗಿದೆ. ಶಿವಾನಂದಾ ಸ್ಟೋರ್ಸ್ ಬಳಿ ಕೆಳ ಸೇತುವೆ ಕೆಲಸ ಪ್ರಗತಿಯಲ್ಲಿರುತ್ತದೆ. ಆದ್ದರಿಂದ, ವಿಧಾನಸೌಧ ಲೇಔಟ್‌ನಿಂದ ಕೃ.ರಾ.ಮಾರುಕಟ್ಟೆಗೆ ಕಾರ್ಯಾಚರಣೆಯಾಗುತ್ತಿದ್ದ ಮಾರ್ಗ ಸಂಖ್ಯೆ. 77-ಡಿ ಬಸ್ಸನ್ನು ಮತ್ತು ಶಿವಾಜಿನಗರಕ್ಕೆ ಕಾರ್ಯಾಚರಣೆಯಾಗುತ್ತಿದ್ದ. 79-ಜಿ ಬಸ್ಸನ್ನು ಮಾರ್ಗ ಬದಲಾವಣೆ ಮಾಡಿ ಆನಂದರಾವ್ ಸರ್ಕಲ್ ಮೂಲಕ ಕಾರ್ಯಾಚರಣೆ ಮಾಡುತ್ತಿದ್ದು, ಇದರಿಂದ 2 ಕಿ.ಮೀ. ಮಾರ್ಗದ ದೂರ ಹೆಚ್ಚಾಗಿ ಪ್ರತಿ ಸುತ್ತುವಳಿಗೆ 5 ರಿಂದ 10 ನಿಮಿಷ ಸಂಚಾರದ ವೇಳೆ ಹೆಚ್ಚಾಗಿ ಬೇಕಾಗುತ್ತದೆ. ಅಲ್ಲದೆ, ರಸ್ತೆಗಳಲ್ಲಿ ಸಂಚಾರದ ಒತ್ತಡ ಮತ್ತು ಸಿಗ್ನಲ್ ದೀಪಗಳಿಂದ ನಿಗದಿತ ವೇಳೆಗೆ ತಲುಪುವುದು ಕಷ್ಟವಾಗಿರುತ್ತದೆ. ಈ ಕಾರಣದಿಂದ ಈ ಬಸ್ಸುಗಳ ಕಾರ್ಯಾಚರಣೆ ವೇಳಾ ಪಟ್ಟಿಯ ಪ್ರಕಾರ ಆಗುವುದರಲ್ಲಿ ವ್ಯತ್ಯಾಸವಿರುತ್ತದೆ. ಒಬ್ಬರು ಸಂಚಾರ ನಿಯಂತ್ರಕರನ್ನು ನಿಯೋಜಿಸಿ ಈ ಮಾರ್ಗಗಳ ಬಸ್ಸುಗಳ ಕಾರ್ಯಚರಣೆಯನ್ನು ಉಸ್ತುವಾರಿ ಮಾಡಿ ಸರಿಪಡಿಸಲಾಗುವುದು.

ಇ) ಈ ಬಗ್ಗೆ ನಿರ್ದಿಷ್ಟ ದೂರು ಬಂದಿರುವುದಿಲ್ಲ. ಚಾಲಕರು ನಿರ್ವಾಹಕರು ಪ್ರಯಾಣಿಕರೊಂದಿಗೆ ಅನುಚಿತವಾಗಿ ವರ್ತಿಸಿರುವ ಬಗ್ಗೆ ಯಾವುದೇ ನಿರ್ದಿಷ್ಟ ದೂರು ಬಂದಲ್ಲಿ ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಹೌದು. ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ದೂರವಾಣಿ ಮೂಲಕ ಯಾವುದೇ ನಿರ್ದಿಷ್ಟ ದೂರು ಬಂದಲ್ಲಿ ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. ಆದರೆ, ಈ ವಿಷಯದಲ್ಲಿ

ನಿರ್ದಿಷ್ಟವಾದ ದೂರು ದೂರವಾಣಿ ಮುಖಾಂತರ ಬಂದಿರುವುದಿಲ್ಲ.

ಊ) ವಿಧಾನಸೌಧ ಲೇಔಟ್‌ನಿಂದ ಕೃ.ರಾ. ಮಾರುಕಟ್ಟೆ, ಶಿವಾಜಿನಗರ, ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಕಾರ್ಯಾಚರಣೆಯಾಗುವ ಬಸ್ಸುಗಳ ವೇಳಾ ಪಟ್ಟಿಯನ್ನು ಬದಲಾವಣೆ ಮಾಡುವ ಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡು ಒಬ್ಬರು ಸಂಚಾರ ನಿಯಂತ್ರಕರನ್ನು ನಿಯೋಜಿಸಿ ಈ ಮಾರ್ಗಗಳ ಕಾರ್ಯಾಚರಣೆಯನ್ನು ಉಸ್ತುವಾರಿ ಮಾಡಿ ಸರಿಪಡಿಸಲಾಗುವುದು

ಚಾಲಕರ, ನಿರ್ವಾಹಕರ ಮತ್ತು ಅಧಿಕಾರಿಗಳ ಮೇಲೆ ಯಾವುದೇ ನಿರ್ದಿಷ್ಟ ದೂರು ಬಂದಲ್ಲಿ ಅದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಬಸವರಾಜ ಭೀಮಪ್ಪ ಹಿತ್ನಾಳ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ದಾಸರಹಳ್ಳಿ ನಗರ ಸಭೆ ವ್ಯಾಪ್ತಿಯಲ್ಲಿ ಬರುವ ವಿಧಾನಸೌಧ ಬಡಾವಣೆಯಿಂದ ಕೃಷ್ಣ ರಾಜೇಂದ್ರ ಮಾರುಕಟ್ಟೆ ಬೆಂಗಳೂರು ಬಸ್ ನಿಲ್ದಾಣಕ್ಕೆ ಓಡಾಡುತ್ತಿರುವ ಬಿ.ಎಂ.ಟಿ.ಸಿ. ಬಸ್ಸುಗಳು ಸರಿಯಾದ ಸಮಯಕ್ಕೆ ಬಾರದಿರುವುದರಿಂದ ಅಲ್ಲಿಂದ ಬರತಕ್ಕ ಎಲ್ಲಾ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗುತ್ತದೆ. ಈ ರೀತಿ ತೊಂದರೆಯಾಗುವುದನ್ನು ಸರಿಪಡಿಸುವಂತೆ ಅನೇಕ ಸಲ ಅಲ್ಲಿನ ನಿವಾಸಿಗಳು ಹಾಗೂ ಸಾರ್ವಜನಿಕರು ಬಿ.ಎಂ.ಟಿ.ಸಿ. ಪ್ರಧಾನ ಸಂಚಾರಿ ನಿಯಂತ್ರಕರಿಗೆ ದೂರನ್ನು ಸಲ್ಲಿಸಿದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಬಸ್ ಚಾಲಕರು ನಿರ್ವಾಹಕರು ವೇಳಾಪಟ್ಟಿಯಂತೆ ಬಸ್ಸುಗಳನ್ನು ಓಡಾಡಿಸುವಂತೆ ಪ್ರಯಾಣಿಕರು ಕೇಳಿಕೊಂಡಾಗ ದುರ್ವರ್ತನೆಯಿಂದ ವರ್ತಿಸಿದ್ದರ ಬಗ್ಗೆ ದೂರನ್ನು ಸಲ್ಲಿಸಿದ್ದಾರೆ, ಅಂಥವರ ಮೇಲೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಪ್ರಯಾಣಿಕರಿಗೆ ಏನಾದರೂ ತೊಂದರೆಯಾದಲ್ಲಿ ದೂರವಾಣಿಯ ಮೂಲಕ ನೇರವಾಗಿ ದೂರು ಸಲ್ಲಿಸಿದ್ದಲ್ಲಿ ತಕ್ಷಣ ಕ್ರಮ ಕೈಗೊಳ್ಳಲಾಗುವುದೆಂದು ದಿನಪತ್ರಿಕೆಗಳಲ್ಲಿ ಪ್ರಕಟಿಸಿರುವುದು ನಿಜವಲ್ಲವೇ? ಇದಕ್ಕೂ ಕೂಡ ಸರ್ಕಾರ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿರುವುದಿಲ್ಲ. ಆ ಭಾಗದಲ್ಲಿರುವ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮಾನ್ಯ ಸಚಿವರು ಆ ಭಾಗಕ್ಕೆ ಹೆಚ್ಚಿನ ಬಸ್ಸುಗಳನ್ನು ಹಾಕಲು ಅವಕಾಶ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ಪ್ರಶ್ನೆಗೆ ನಾವು ಈಗಾಗಲೆ ಉತ್ತರ ಕೊಟ್ಟಿದ್ದೇವೆ. ದೂರುಗಳು ಬಂದಿವೆಯೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದೇವೆ. ಅದಕ್ಕೆ ಕಾರಣ ಏನೆಂದರೆ, ಶಿವಾನಂದ ಸರ್ಕಲ್ ಹತ್ತಿರ ಹೊಸ ಅಂಡರ್ ಗ್ರೌಂಡ್ ಬ್ರಿಡ್ಜ್ ಆಗುತ್ತಿದೆ. ಅದು ಪೂರ್ಣವಾದಮೇಲೆ ಬಸ್ಸು ನೇರವಾಗಿ ಆ ಕಡೆಗೆ ಹೋಗಲು ಸಾಧ್ಯವಾಗುತ್ತದೆ. ಕೆಂಪೇಗೌಡ ಬಸ್ ನಿಲ್ದಾಣದಿಂದ ಶಾಸಕರ ಲೇಔಟ್ ಕಡೆಗೆ ಹೋಗತಕ್ಕ ಬಸ್ಸುಗಳೇನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತಿವೆ ಅದು ಕಡಿಮೆಯಾಗುತ್ತದೆ. ಅದಕ್ಕಾಗಿ ಅಲ್ಲಿ ಹೊಸದಾಗಿ ಕಂಟ್ರೋಲರ್‌ರನ್ನು ನೇಮಿಸಿ ವೇಳಾಪಟ್ಟಿಯ ಪ್ರಕಾರವೇ ಹೋಗಬೇಕು. ಅದಷ್ಟು ತೊಂದರೆ ಕಡಿಮೆಯಾಗಬೇಕು, ಎಂದು night halt bus ನ್ನೇ ವಿಶೇಷವಾಗಿ ಮಾಡಿಸಿ ಆ ಒಂದು ಮಾರ್ಗದಲ್ಲಿ ಸುಸೂತ್ರವಾಗಿ ನಡೆಸಲು ಬಯಸುತ್ತೇವೆ. ಅದಕ್ಕೆ ಆದೇಶ ಕೊಟ್ಟಿದ್ದೇವೆ. ಅದು ಇಂದಿನಿಂದ ಪ್ರಾರಂಭವಾಗುತ್ತದೆ.